KAMS510005592018

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ನಂಜನಗೂಡು**

**ಉಪಸ್ಥಿತರು**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್‌ಎಲ್‌ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ನಂಜನಗೂಡು .

**ಅಸಲು ದಾವಾ ಸಂಖ್ಯೆಃ 71/2018**

**ದಿನಾಂಕಃ 16 ನೇ ನವೆಂಬರ್ 2022**

**ವಾದಿ/ಯರುಃ** ಹೆಚ್.ಎಸ್. ಮಲ್ಲಿಕಾರ್ಜುನ ಮೃತ ವಾರಸುದಾರರಾದ
1. ಹೆಚ್.ಎಸ್. ಸುಗುಣ ಕೋಂ ಶಾಂತಪ್ಪ, 46 ವರ್ಷ,
2. ಎಸ್. ವತ್ಸಲ ಕೋಂ ಎಸ್. ಬಸವರಾಜು, 38 ವರ್ಷ,
ವಾಸಃ ಹುಳಿಮಾವು ಗ್ರಾಮ, ಚಿಕ್ಕಯ್ಯನಛತ್ರ ಹೋಬಳಿ,
ನಂಜನಗೂಡು ತಾಲ್ಲೂಕು

(ಪ್ರತಿನಿಧಿಸುವವರುಃ ಶ್ರೀ ಸಿ.ಎಲ್. ಬಸವರಾಜು, ನ್ಯಾಯವಾದಿಗಳು)

**-ವಿರುದ್ದ-**

**ಪ್ರತಿವಾದಿ/ಯರುಃ** 1. ಕಾಳಮಾದಪ್ಪ ಬಿನ್ ಲೇಟ್ ಭದ್ರಮಾದಯ್ಯ, 75 ವರ್ಷ,
2. ಸದಾನಂದ ಬಿನ್ ಕಾಳಮಾದಪ್ಪ, 43 ವರ್ಷ, ವಾಸಃ
ಹುಳಿಮಾವು ಗ್ರಾಮ, ಚಿಕ್ಕಯ್ಯನಛತ್ರ ಹೋಬಳಿ,

ನಂಜನಗೂಡು ತಾಲ್ಲೂಕು

(ಏಕತರ್ಪಿಯಾಗಿರುತ್ತಾರೆ)

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 02.02.2018 | | |
| 2 | ದಾವಾ ಸ್ವರೂಪ | ಶಾಶ್ವತ ನಿರ್ಬಂಧಕಾಜ್ಞೆಗಾಗಿ | | |
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 29.07.2022 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 16.11.2022 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 04 | 09 | 18 |

**-: ತೀರ್ಪು :-**

ವಾದಿಯರು ಪ್ರಸ್ತುತ ಈ ದಾವೆಯನ್ನು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯರಾಗಲೀ, ಅವರಿಂದ ನೇಮಕಗೊಂಡ ಯಾವುದೇ ಕೆಲಸಗಾರರಾಗಲೀ, ಪ್ರತಿನಿಧಿಗಳಾಗಲೀ, ಬೆಂಬಲಿಗರಾಗಲೀ ಅಥವಾ ಯಾವುದೇ ವ್ಯಕ್ತಿಗಳಾಗಲೀ ಯಾವುದೇ ರೀತಿ ಅತಿಕ್ರಮ ಪ್ರವೇಶ ಉಂಟು ಮಾಡಿ ಆಕ್ರಮಿಸಿಕೊಳ್ಳದಂತೆ ಹಾಗೂ ವಾದಿಯರ ಶಾಂತಿಯುತ ಅನುಭವ ಅಡ್ಡಿ, ಆತಂಕ, ಕಿರುಕುಳ ನೀಡದಂತೆ ಶಾಶ್ವತ ನಿರ್ಬಂಧಕಾಜ್ಞೆಯನ್ನು ಕೋರಿ ದಾವೆಯನ್ನು ಸಲ್ಲಿಸಿದ್ದು ಇರುತ್ತದೆ.

2. **ದಾವೆಯ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆಃ-**

ದಾವಾ ಅನುಸೂಚಿತ ಸ್ವತ್ತಾದ ಹುಳಿಮಾವು ಗ್ರಾಮದ ಪೂರ್ವ ಪಶ್ಚಿಮ 17 ಹಾಗೂ ಉತ್ತರ ದಕ್ಷಿಣ 17 ಗಜಗಳ ಖಾಲಿ ನಿವೇಶನವು ಮೂಲತಃ ಹುಳಿಮಾವು ಗ್ರಾಮದ ಮಲ್ಲಪ್ಪ ಮತ್ತು ನಂಜಪ್ಪರವರಿಗೆ ಸೇರಿದ್ದಾಗಿದ್ದು, ಮೇಲ್ಕಂಡ ವಿಸ್ತೀರ್ಣದಲ್ಲಿ ಪಶ್ಚಿಮದ ಕಡೆಗೆ ಮೇಲ್ಕಂಡ ಮಲ್ಲಪ್ಪರವರಿಗೆ ಸೇರಿದ 1/3 ಭಾಗದ ಖಾಲಿ ನಿವೇಶನವನ್ನು ವಾದಿಯ ಅಜ್ಜನಾದ ಚನ್ನಮಲ್ಲಯ್ಯರವರು ದಿನಾಂಕ 06.09.1944 ರ ನೋಂದಣಿ ಕ್ರಯ ಪತ್ರದಂತೆ ಪಡೆದುಕೊಂಡಿರುತ್ತಾರೆ. ಸದರಿ ನಿವೇಶನವನ್ನು ಚನ್ನಮಲ್ಲಯ್ಯರವರು ದಿನಾಂಕ 06.04.1944 ರಿಂದ ಸ್ವಾಧೀನಾನುಭವವನ್ನು ಹೊಂದಿ ಮಾಲೀಕರಾಗಿದ್ದು, ಅವರ ಮರಣ ನಂತರ ಅವರ ಒಬ್ಬನೇ ಮಗನಾದ ವಾದಿಯ ತಂದೆ ಸದರಿ ನಿವೇಶನದಲ್ಲಿ ಸ್ವಾಧೀನಾನುಭವವನ್ನು ಹೊಂದಿ ಮಾಲೀಕರಾಗಿರುತ್ತಾರೆ. ಮೇಲ್ಕಂಡ ಪೂರ್ವ ಪಶ್ಚಿಮ 17 ಗಜ ಹಾಗೂ ಉತ್ತರ ದಕ್ಷಿಣ 17 ಗಜದ ನಿವೇಶನದಲ್ಲಿ ಪೂರ್ವಕ್ಕೆ 2/3 ಭಾಗದಲ್ಲಿ ನಂಜಪ್ಪರವರು ಸ್ವಾಧೀನಾನುಭವವನ್ನು ಹೊಂದಿದ್ದರು. ಅವರ ಮರಣದ ನಂತರ ನಂಜಪ್ಪರವರ ಪತ್ನಿಯಾದ ಚಿಕ್ಕಮಾದಮ್ಮ ಮತ್ತು ಆಕೆಯ ಮಗನಾದ ಗುರುಮಲ್ಲಯ್ಯರವರು ಸ್ವಾಧೀನಾನುಭವವನ್ನು ಹೊಂದಿ ಮಾಲೀಕರಾಗಿದ್ದರು. ಸದರಿ ಚಿಕ್ಕಮಾದಮ್ಮ ಮತ್ತು ಗುರುಮಲ್ಲಯ್ಯರವರು ತಮಗೆ ಸೇರಿದ 2/3 ಭಾಗದ ನಿವೇಶನವನ್ನು ದಿನಾಂಕ 18.03.1958 ರಂದು ವಾದಿಯ ತಂದೆಯ ಚಿಕ್ಕಪ್ಪನಾದ ಜವನಪ್ಪರವರ ಮಗನಾದ ಮಾದಪ್ಪರವರಿಗೆ ನೋಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದರು. ಸದರಿ ಮಾದಪ್ಪರವರು ದಿನಾಂಕ 18.03.1958 ರಿಂದ ತಾವು ಕ್ರಯಕ್ಕೆ ಪಡೆದ ಮೇಲ್ಕಂಡ ಭಾಗದ ನಿವೇಶನವನ್ನು ದಿನಾಂಕ 30.01.1986 ರವರೆಗೆ ಸ್ವಾಧೀನಾನುಭವವನ್ನು ಹೊಂದಿದ್ದರು. ಸದರಿ ಮಾದಪ್ಪರವರು ದಿನಾಂಕ 30.01.1986 ರಂದು ವಾದಿಯ ತಂದೆಯಾದ ಹೆಚ್ ಸಿ ಶಿವಪ್ಪರವರಿಗೆ ನೋಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ದಾವಾ ಅನುಸೂಚಿತ ಸ್ವತ್ತಾದ ಮೇಲ್ಕಂಡ ಖಾಲಿ ನಿವೇಶನದ ಕುರಿತು ವಾದಿಯ ತಂದೆಯು ಕಾನೂನುಬದ್ಧ ಮಾಲೀಕರಾಗಿ ಸ್ವಾಧೀನಾನುಭವವನ್ನು

ಹೊಂದಿದ್ದರು. ದಾವಾ ಅನುಸೂಚಿತ ಸ್ವತ್ತನ್ನು ವಾದಿಯ ತಂದೆಯಾದ ಹೆಚ್ ಸಿ ಶಿವಪ್ಪರವರು ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿದ್ದು, ಸದರಿ ಸ್ವತ್ತಿನ ಖಾತೆಯು ವಾದಿಯ ತಂದೆಯ ಹೆಸರಿನಲ್ಲಿ ನಮೂದು ಇರುತ್ತದೆ. ವಾದಿಯ ತಂದೆಯು ದಿನಾಂಕ 25.02.2014 ರಂದು ಮೃತಪಟ್ಟಿರುತ್ತಾರೆ. ವಾದಿಯ ತಂದೆಯ ಮರಣದ ನಂತರ ಅವರ ಒಬ್ಬನೇ ಮಗನಾದ ವಾದಿಯು ದಾವಾ ಸ್ವತ್ತಿನ ಕಾನೂನು ಬದ್ದ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ದಾವಾ ಅನುಸೂಚಿತ ಸ್ವತ್ತಿನ ಪಶ್ಚಿಮದ ದಿಕ್ಕಿನಲ್ಲಿ ಗಲ್ಲಿಯ ನಂತರದಲ್ಲಿ ಪ್ರತಿವಾದಿಯರ ಮನೆ ಇರುತ್ತದೆ. ಪ್ರತಿವಾದಿಯರಿಗೆ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಯಾವುದೇ ಹಕ್ಕು ಮತ್ತು ಸ್ವಾಧೀನತೆ ಇರುವುದಿಲ್ಲ. ಆದಾಗ್ಯೂ ಪ್ರತಿವಾದಿಯರು ವಾದಿಯರ ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನತೆಗೆ ತಕರಾರು ಮಾಡಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ವಾದಿಯು ಶಾಶ್ವತ ನಿರ್ಬಂದಕಾಜ್ಞೆಯ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿದ್ದು, ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಈ ಪ್ರಕರಣದಲ್ಲಿ ವಾದಿಯರ ದಾವೆಯನ್ನು ದಾಖಲಿಸಿಕೊಂಡ ನಂತರ ಪ್ರತಿವಾದಿಯರಿಗೆ ನ್ಯಾಯಾಲಯದ ಮೂಲಕ ಸಮನ್ಸನ್ನು ಜಾರಿಗೊಳಿಸಿದ್ದು, ಸದರಿ ಸಮನ್ಸನ್ನು ಸ್ವೀಕರಿಸಿದ್ದಾಗ್ಯೂ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಹಾಗಾಗಿ ಪ್ರತಿವಾದಿಯರನ್ನು ಏಕಪಕ್ಷೀಯ ಎಂದು ಆದೇಶಿಸಲಾಗಿದೆ.

4. ವಾದಿಯರ ಪರ ವಕೀಲರ ವಾದವನ್ನು ಆಲಿಸಲಾಯಿತು.

5. ಮೇಲ್ಕಾಣಿಸಿದ ವಾದ ಪತ್ರದ ಸಂಗತಿಗಳನ್ನು ಆಧರಿಸಿ ಈ ಕೆಳಕಾಣಿಸಿದ ಅಂಶಗಳನ್ನು ರೂಪಿಸಲಾಗಿದೆ.

**<u>ಅಂಶಗಳು</u>**

1. ವಾದಿಯರು ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಅನುಸೂಚಿತ ಸ್ವತ್ತಿನ ಕಾನೂನುಬದ್ದ ಸ್ವಾಧೀನತೆಯನ್ನು ಹೊಂದಿರುತ್ತಾರೆಂದು ಸಾಬೀತು ಪಡಿಸುತ್ತಾರೆಯೇ ?

2. ಪ್ರತಿವಾದಿಯರು ವಾದಿಯರ ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನತೆಗೆ ತಕರಾರು ಮಾಡಿರುತ್ತಾರೆಂದು ವಾದಿಯರು ಸಾಬೀತುಪಡಿಸುತ್ತಾರೆಯೇ ?

3. ವಾದಿಯರು ತಾವು ಕೇಳಿದ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಂದು ಸಾಬೀತು ಪಡಿಸುತ್ತಾರೆಯೇ ?

4. ಹಾಗಿದ್ದರೆ ಯಾವ ಆದೇಶ ಅಥವಾ ಡಿಕ್ರಿ ?

6. ಮೇಲ್ಕಾಣಿಸಿದ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ 1(ಎ) ನೇ ವಾದಿಯು ತನ್ನನ್ನು ತಾನು ಪಿಡಬ್ಲ್ಯೂ.1 ಎಂದು ಸಾಕ್ಷಿ ಮಾಡಿಸಿದ್ದು, ತನ್ನ ಪರವಾಗಿ ನಿಪಿ.1 ರಿಂದ 05 ರವರೆಗೆ ದಾಖಲೆಗಳನ್ನು ಹಾಜರುಪಡಿಸಿದ್ದು, ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ. ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಪ್ರತಿವಾದಿಯರ ಪರವಾಗಿ ಯಾವುದೇ ಸಾಕ್ಷ್ಯ ಇಲ್ಲವೆಂದು ನ್ಯಾಯಾಲಯವು ತೆಗೆದುಕೊಂಡಿರುತ್ತದೆ.

7. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ-

ಅಂಶ 1 :- ಸಕಾರಾತ್ಮಕವಾಗಿ

ಅಂಶ 2 :- ಸಕಾರಾತ್ಮಕವಾಗಿ

ಅಂಶ 3 :- ಸಕಾರಾತ್ಮಕವಾಗಿ

ಅಂಶ 4 :- ಅಂತಿಮ ಆದೇಶದಂತೆ

## ಕಾ ರ ಣ ಗ ಳು

8. **<u>ಅಂಶ 1 ರಿಂದ 3 :-</u>** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದಲೂ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ಆಗಿರುವುದರಿಂದಲೂ ಈ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಸಾಬೀತುಪಡಿಸುವಂತಹ ಹೊಣೆಗಾರಿಕೆಯನ್ನು ವಾದಿಯರು ಹೊಂದಿದ್ದು, ಸದರಿ ಅಂಶಗಳನ್ನು ಸಾಬೀತುಪಡಿಸಲು ವಾದಿಯರು ನ್ಯಾಯಾಲಯದಲ್ಲಿ ಹಾಜರಾಗಿ ತನ್ನ ಪರವಾಗಿ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ನೀಡಿರುತ್ತಾರೆ.

9. ಈ ಅಂಶಗಳ ಕುರಿತು ವಾದಿಯರು ತಮ್ಮ ವಾದಪತ್ರದಲ್ಲಿ ದಾವಾ ಅನುಸೂಚಿತ ಸ್ವತ್ತಾದ ಹುಳಿಮಾವು ಗ್ರಾಮ ಪೂರ್ವ ಪಶ್ಚಿಮ 17 ಹಾಗೂ ಉತ್ತರ ದಕ್ಷಿಣ 17 ಗಜಗಳ ಖಾಲಿ ನಿವೇಶನವು ಮೂಲತಃ ಹುಳಿಮಾವು ಗ್ರಾಮದ ಮಲ್ಲಪ್ಪ ಮತ್ತು ನಂಜಪ್ಪರವರಿಗೆ ಸೇರಿದ್ದಾಗಿದ್ದು, ಮೇಲ್ಕಂಡ ವಿಸ್ತೀರ್ಣದಲ್ಲಿ ಪಶ್ಚಿಮದ ಕಡೆಗೆ ಮೇಲ್ಕಂಡ ಮಲ್ಲಪ್ಪರವರಿಗೆ ಸೇರಿದ 1/3 ಭಾಗದ ಖಾಲಿ ನಿವೇಶನವನ್ನು ವಾದಿಯ ಅಜ್ಜನಾದ ಚನ್ನಮಲ್ಲಯ್ಯರವರು ದಿನಾಂಕ 06.09.1944 ರ ನೋಂದಣಿ ಕ್ರಯ ಪತ್ರದಂತೆ ಪಡೆದುಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಸದರಿ ನಿವೇಶನವನ್ನು ಚನ್ನಮಲ್ಲಯ್ಯರವರು ದಿನಾಂಕ 06.04.1944 ರಿಂದ ಸ್ವಾಧೀನಾನುಭವವನ್ನು ಹೊಂದಿ ಮಾಲೀಕರಾಗಿದ್ದು, ಅವರ ಮರಣ ನಂತರ ಅವರ ಒಬ್ಬನೇ ಮಗನಾದ ವಾದಿಯ ತಂದೆ ಸದರಿ ನಿವೇಶನದಲ್ಲಿ ಸ್ವಾಧೀನಾನುಭವವನ್ನು ಹೊಂದಿ ಮಾಲೀಕರಾಗಿರುತ್ತಾರೆ. ಮೇಲ್ಕಂಡ ಪೂರ್ವ ಪಶ್ಚಿಮ 17 ಗಜ ಹಾಗೂ ಉತ್ತರ ದಕ್ಷಿಣ 17 ಗಜದ ನಿವೇಶನದಲ್ಲಿ ಪೂರ್ವಕ್ಕೆ 2/3 ಭಾಗದಲ್ಲಿ ನಂಜಪ್ಪರವರು ಸ್ವಾಧೀನಾನುಭವವನ್ನು ಹೊಂದಿದ್ದರು. ಅವರ ಮರಣದ ನಂತರ ನಂಜಪ್ಪರವರ ಪತ್ನಿಯಾದ ಚಿಕ್ಕಮಾದಮ್ಮ ಮತ್ತು ಆಕೆಯ ಮಗನಾದ ಗುರುಮಲ್ಲಯ್ಯರವರು ಸ್ವಾಧೀನಾನುಭವವನ್ನು ಹೊಂದಿ ಮಾಲೀಕರಾಗಿದ್ದರು. ಸದರಿ ಚಿಕ್ಕಮಾದಮ್ಮ ಮತ್ತು ಗುರುಮಲ್ಲಯ್ಯರವರು ತಮಗೆ ಸೇರಿದ 2/3 ಭಾಗದ ನಿವೇಶನವನ್ನು ದಿನಾಂಕ 18.03.1958 ರಂದು ವಾದಿಯ ತಂದೆಯ ಚಿಕ್ಕಪ್ಪನಾದ ಜವನಪ್ಪರವರ ಮಗನಾದ

ಮಾದಪ್ಪರವರಿಗೆ ನೋಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದರು. ಸದರಿ ಮಾದಪ್ಪರವರು ದಿನಾಂಕ 18.03.1958 ರಿಂದ ತಾವು ಕ್ರಯಕ್ಕೆ ಪಡೆದ ಮೇಲ್ಕಂಡ ಭಾಗದ ನಿವೇಶನವನ್ನು ದಿನಾಂಕ 30.01.1986 ರವರೆಗೆ ಸ್ವಾಧೀನಾನುಭವವನ್ನು ಹೊಂದಿದ್ದರು. ಸದರಿ ಮಾದಪ್ಪರವರು ದಿನಾಂಕ 30.01.1986 ರಂದು ವಾದಿಯ ತಂದೆಯಾದ ಹೆಚ್.ಸಿ. ಶಿವಪ್ಪರವರಿಗೆ ನೋಂದಣಿ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ದಾವಾ ಅನುಸೂಚಿತ ಸ್ವತ್ತಾದ ಮೇಲ್ಕಂಡ ಖಾಲಿ ನಿವೇಶನದ ಕುರಿತು ವಾದಿಯ ತಂದೆಯು ಕಾನೂನು ಬದ್ದ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿದ್ದರು. ದಾವಾ ಅನುಸೂಚಿತ ಸ್ವತ್ತನ್ನು ವಾದಿಯ ತಂದೆಯಾದ ಹೆಚ್.ಸಿ. ಶಿವಪ್ಪರವರ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿದ್ದು, ಸದರಿ ಸ್ವತ್ತಿನ ಖಾತೆಯು ವಾದಿಯ ತಂದೆಯ ಹೆಸರಿನಲ್ಲಿ ನಮೂದು ಇರುತ್ತದೆ. ವಾದಿಯ ತಂದೆಯು ದಿನಾಂಕ 25.02.2014 ರಂದು ಮೃತಪಟ್ಟಿರುತ್ತಾರೆ. ವಾದಿಯ ತಂದೆಯ ಮರಣದ ನಂತರ ಅವರ ಒಬ್ಬನೇ ಮಗನಾದ ವಾದಿಯು ದಾವಾ ಸ್ವತ್ತಿನ ಕಾನೂನು ಬದ್ದ ಮಾಲೀಕರಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ದಾವಾ ಅನುಸೂಚಿತ ಸ್ವತ್ತಿನ ಪಶ್ಚಿಮದ ದಿಕ್ಕಿನಲ್ಲಿ ಗಲ್ಲಿಯ ನಂತರದಲ್ಲಿ ಪ್ರತಿವಾದಿಯರ ಮನೆ ಇರುತ್ತದೆ. ಪ್ರತಿವಾದಿಯರಿಗೆ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಯಾವುದೇ ಹಕ್ಕು ಮತ್ತು ಸ್ವಾಧೀನತೆ ಇರುವುದಿಲ್ಲ. ಆದಾಗ್ಯೂ ಪ್ರತಿವಾದಿಯರು ವಾದಿಯರ ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನತೆಗೆ ತಕರಾರು ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಉಲ್ಲೇಖಿಸಿರುತ್ತಾರೆ.

10. ಈ ಮೇಲ್ಕಂಡ ಅಂಶಗಳ ಕುರಿತು 1(ಎ)ನೇ ವಾದಿಯು ತನ್ನನ್ನು ತಾನು ಪಿಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ತನ್ನ ಮೌಖಿಕ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು, ಮೇಲ್ಕಂಡ ವಾದಪತ್ರದಲ್ಲಿನ ಅಂಶಗಳನ್ನೇ ತನ್ನ ಪ್ರಮಾಣಪತ್ರದಲ್ಲಿ ಪುನರುಚ್ಚರಿಸಿರುತ್ತಾರೆ. ವಾದಿ ತನ್ನ ಮೌಖಿಕ ಸಾಕ್ಷಕ್ಕೆ ಪೂರಕವಾಗಿ ಈ ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸಲು ನಿಪಿ.1 ರಂತೆ ದಿನಾಂಕ

06.09.1944 ರ ನೋಂದಣಿ ಕ್ರಯ ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರಂತೆ ನಂಜನಗೂಡು ತಾಲ್ಲೂಕಿನ ಚಿಕ್ಕಯ್ಯಛತ್ರ ಹೋಬಳಿಯ ಹುಳಿಮಾವು ಗ್ರಾಮದ ಚನ್ನಮಲ್ಲಪ್ಪ ಬಿನ್ ಮಲ್ಲಪ್ಪರವರು ಅದೇ ಗ್ರಾಮದ ಮಲ್ಲಪ್ಪ ಬಿನ್ ದೊಡ್ಡನಂಜಪ್ಪ ಮತ್ತು ಲಿಂಗಯ್ಯ ಬಿನ್ ಮಲ್ಲಪ್ಪರವರಿಂದ ಹುಳಿಮಾವು ಗ್ರಾಮದ ಪೂರ್ವಕ್ಕೆ ಸರ್ಕಾರಿ ಜಮೀನು, ಪಶ್ಚಿಮಕ್ಕೆ ಕರೆನಿಂಗಯ್ಯನ ಜಮೀನು, ದಕ್ಷಿಣಕ್ಕೆ ಮಲ್ಲಯ್ಯನ ಜಮೀನು ಮತ್ತು ಉತ್ತರಕ್ಕೆ ಪುಟ್ಟನಿಂಗಯ್ಯನ ಜಮೀನು ಎಂಬ ಚೆಕ್ಕು ಬಂಧಿಗೆ ಒಳಪಟ್ಟ ಸರ್ವೆ ನಂಬರ್ 90/1 ರ 1 ಎಕಡೆ 20 ಗುಂಟೆ ಪೈಕಿ 1/3 ಹಿಸ್ಸೆಯ 22 ಗುಂಟೆ ಸ್ವತ್ತಿಗೆ ಪೂರ್ವಕ್ಕೆ ಪರದೇಶಿ ಮಾದಯ್ಯರವರ ಜಮೀನು, ಪಶ್ಚಿಮಕ್ಕೆ ಭದ್ರಿ ಮಾದಯ್ಯನ ಮನೆ ಮತ್ತು ಗಲ್ಲಿ, ದಕ್ಷಿಣಕ್ಕೆ ಭದ್ರಿ ಮಾದಯ್ಯನ ಹಿತ್ತಲು ಮತ್ತು ಉತ್ತರಕ್ಕೆ ಪುಟ್ಟ ಮಾದಯ್ಯನ ಹಿತ್ತಲು ಎಂಬ ಚೆಕ್ಕು ಬಂಧಿಗೆ ಒಳಪಟ್ಟಂತಹ ಪೂರ್ವ ಪಶ್ಚಿಮ 17 ಗಜ ಮತ್ತು ಉತ್ತರ ದಕ್ಷಿಣ 17 ಗಜದ ಸ್ವತ್ತನ್ನು ಖರೀದಿಸುವ ಕುರಿತು ಕಂಡು ಬರುತ್ತದೆ. ನಿಪಿ 2 ರಂತೆ ದಿನಾಂಕ 18.03.1958 ರ ನೋಂದಣಿ ಕ್ರಯ ಪತ್ರವನ್ನು ಹಾಜರುಪಡಿಸಿದ್ದು, ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರ ಹೋಬಳಿಯ ಹುಳಿಮಾವು ಗ್ರಾಮದ ಮಾದಪ್ಪ ಬಿನ್ ಜವನಪ್ಪನವರು ಅದೇ ಗ್ರಾಮದ ಚಿಕ್ಕಮಾದಮ್ಮ ಕೋಂ ನಂಜಪ್ಪ ಮತ್ತು ಗುರುಮಲ್ಲಯ್ಯ ಬಿನ್ ನಂಜಪ್ಪರವರಿಂದ ಪೂರ್ವಕ್ಕೆ ಪರದೇಶಿ ಮಾದಪ್ಪರವರ ಗದ್ದೆ, ಪಶ್ಚಿಮಕ್ಕೆ ತಿರುಗಾಡುವ ದಾರಿ ಮತ್ತು ಭದ್ರಿ ಮಾದಪ್ಪರವರ ಮನೆ, ದಕ್ಷಿಣಕ್ಕೆ ಭದ್ರಿ ಮಾದಪ್ಪರವರ ಹಿತ್ತಲು ಮತ್ತು ಉತ್ತರಕ್ಕೆ ಪುಟ್ಟಮಾದಪ್ಪನ ಹಿತ್ತಲು ಎಂಬ ಚೆಕ್ಕು ಬಂಧಿಗೆ ಒಳಪಟ್ಟಂತಹ ಪೂರ್ವ ಪಶ್ಚಿಮ 17 ಗಜ ಮತ್ತು ಉತ್ತರ ದಕ್ಷಿಣ 17 ಗಜದ ಪೈಕಿ, ಪಶ್ಚಿಮಕ್ಕೆ ಚೆನ್ನಮಲ್ಲಯ್ಯನ ಒಂದು ಹಿಸ್ಸೆ ಇದ್ದು, ಆ ಪೈಕಿ 1/3 ಭಾಗಾಂಶದ ಪೈಕಿ ಪೂರ್ವ ದಿಕ್ಕಿನ ತಮ್ಮ ಬಾಬ್ತು 2/3 ಹಿಸ್ಸೆಯನ್ನು ಕ್ರಯಕ್ಕೆ ನೀಡಿರುವುದು ಕಂಡು ಬರುತ್ತದೆ. ನಿಪಿ 3 ರಂತೆ ದಿನಾಂಕ 30.01.1986 ರ ನೋಂದಣಿ ಕ್ರಯ ಪತ್ರವನ್ನು ಹಾಜರುಪಡಿಸಿದ್ದು, ಅದರಂತೆ ನಂಜನಗೂಡು ತಾಲ್ಲೂಕಿನ ಚಿಕ್ಕಯ್ಯನ ಛತ್ರ ಹೋಬಳಿಯ ಹುಳಿಮಾವು ಗ್ರಾಮದ

ಹೆಚ್ ಸಿ ಶಿವಪ್ಪ ಬಿನ್ ಚನ್ನಮಲ್ಲಯ್ಯರವರು ಅದೇ ಗ್ರಾಮದ ಮಾದಪ್ಪ ಬಿನ್ ಲೇಟ್ ಜವನಪ್ಪರವರಿಂದ ನಂಜನಗೂಡು ತಾಲ್ಲೂಕಿನ ಚಿಕ್ಕಯ್ಯನ ಛತ್ರ ಹೋಬಳಿಯ ಹುಳಿಮಾವು ಗ್ರಾಮದಲ್ಲಿನ ಕ್ರಯದ ಮೂಲಕ ಬಂದಿರುವ ಪೂರ್ವಕ್ಕೆ ಪರದೇಶ ಮಾದಪ್ಪರವರ ಗದ್ದೆ, ಪಶ್ಚಿಮಕ್ಕೆ ದಾರಿ ಮತ್ತು ಭದ್ರಿ ಮಾದಪ್ಪರವರ ಮನೆ, ದಕ್ಷಿಣಕ್ಕೆ ಭದ್ರಿ ಮಾದಪ್ಪರವರ ಹಿತ್ತಲು ಮತ್ತು ಉತ್ತರಕ್ಕೆ ಪುಟ್ಟ ಮಾದಯ್ಯರವರ ಹಿತ್ತಲು ಎನ್ನುವ ಚೆಕ್ಕು ಬಂಧಿಗೆ ಒಳಪಟ್ಟಂತಹ ಪೂರ್ವ ಪಶ್ಚಿಮ 17 ಗಜ ಹಾಗೂ ಉತ್ತರ ದಕ್ಷಿಣ 17 ಗಜದ ಪೈಕಿ ಪೂರ್ವ ಪಾರ್ಶ್ವದ 2/3 ಹಿಸ್ಸೆಯ ನಿವೇಶನವನ್ನು ದಿನಾಂಕ 19.03.1958 ರ ನೋಂದಣಿ ಕ್ರಯ ಪತ್ರದಂತೆ ಖರೀದಿಸಿರುವ ಕುರಿತು ಮತ್ತು ಹುಳಿಮಾವು ಗ್ರಾಮದ ಪೂರ್ವಕ್ಕೆ ತಿರುಗಾಡುವ ಓಣಿ, ಪಶ್ಚಿಮಕ್ಕೆ ಗಲ್ಲಿ ಮತ್ತು ಮಲ್ಲಪ್ಪರವರ ಮನೆ, ದಕ್ಷಿಣಕ್ಕೆ ತಿರುಗಾಡುವ ದಾರಿ ಮತ್ತು ಭದ್ರಿ ಮಾದಯ್ಯರವರ ಮನೆ ಮತ್ತು ಉತ್ತರಕ್ಕೆ ಗೌರಮ್ಮರವರ ಮನೆ ಎನ್ನುವ ಚೆಕ್ಕು ಬಂಧಿಯ ನಡುವೆ ಇರುವ ಪೂರ್ವ ಪಶ್ಚಿಮ 10 ಗಜ ಮತ್ತು ಉತ್ತರ ದಕ್ಷಿಣ 10 ಗಜದ ಪೈಕಿ, ಪೂರ್ವ ಭಾಗದ 2/3 ಭಾಗಕ್ಕೆ ಪೂರ್ವ ಪಶ್ಚಿಮ 20 ಅಡಿ ಹಾಗೂ ಉತ್ತರ ದಕ್ಷಿಣ 30 ಅಡಿಗಳ ಸ್ವತ್ತಿನ ಕುರಿತಾಗಿ ಈ ಹಿಂದಿನ ಎರಡೂ ಕ್ರಯ ಪತ್ರಗಳನ್ನು ಉಲ್ಲೇಖಿಸಿ ಕ್ರಯಕ್ಕೆ ನೀಡಿರುವ ಕುರಿತು ನಮೂದು ಇರುತ್ತದೆ. ನಿಪಿ 4 ರಂತೆ ದಾವಾ ಅನುಸೂಚಿತ ಸ್ವತ್ತಾದ ಹುಳಿಮಾವು ಗ್ರಾಮದ ಸ್ವತ್ತಿನ ಸಂಖ್ಯೆ.244 ಮತ್ತು ಆಸ್ತಿಯ ಸಂಖ್ಯೆ.244 ರ ಸ್ವತ್ತಿನ ಖಾತೆಯು ಹೆಚ್ ಸಿ ಶಿವಪ್ಪ ಬಿನ್ ಲೇಟ್ ಚನ್ನಮಲ್ಲಯ್ಯರವರ ಹೆಸರಿನಲ್ಲಿ ನಮೂದು ಇದ್ದು, ಪೂರ್ವ ಪಶ್ಚಿಮ 49 ಅಡಿ ಹಾಗೂ ಉತ್ತರ ದಕ್ಷಿಣ 50 ಅಡಿಗಳ ಕುರಿತಾಗಿ ಕ್ರಯ ಪತ್ರದ ಆಧಾರದಲ್ಲಿ ಚನ್ನಮಲ್ಲರವರ ಹೆಸರಿನಲ್ಲಿ ಖಾತೆ ನಮೂದಿಸಿದ್ದು, ಆ ನಂತರದಲ್ಲಿ ಅವರ ಪೌತಿ ಮೇರೆಗೆ ಹೆಚ್ ಸಿ ಶಿವಪ್ಪರವರ ಹೆಸರಿಗೆ ಖಾತೆ ನಮೂದಾಗಿರುವುದು ಕಂಡು ಬರುತ್ತದೆ. ಅಂತೆಯೇ ಸದರಿ ದಾಖಲಾತಿಯಲ್ಲಿ ಸ್ವತ್ತಿನ ಸಂಖ್ಯೆ.244 ರ ಕುರಿತಾಗಿ ಪೂರ್ವಕ್ಕೆ ಸರ್ವೆ ನಂಬರಿನ ಜಮೀನು, ಪಶ್ಚಿಮಕ್ಕೆ ಕಾಳ ಮಾದಪ್ಪನ ಮನೆ, ಉತ್ತರಕ್ಕೆ ನನ್ನದೇ ಉಳಿಕೆ ಸ್ವತ್ತು ಮತ್ತು ದಕ್ಷಿಣಕ್ಕೆ ಕಾಳ ಮಾದಪ್ಪನ

ನಿವೇಶನ ಎಂದು ನಮೂದು ಇರುವುದು ಕಂಡು ಬರುತ್ತದೆ. ನಿಪಿ 5 ರಂತೆ ಹೆಚ್ ಸಿ ಶಿವಪ್ಪ ಬಿನ್ ಚನ್ನಮಲ್ಲಯ್ಯವರಿಗೆ ಸಂಬಂಧಿಸಿದ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಂತೆ ಸದರಿವರು ದಿನಾಂಕ 25.02.2014 ರಂದು ಮೃತ ಪಟ್ಟಿರುವ ಕುರಿತು ನಮೂದು ಇರುತ್ತದೆ.

11. ಈ ಮೇಲ್ಕಂಡ ವಾದಿಯ ಪರ ಹೇಳಿಕೆಗಳನ್ನು ಮತ್ತು ವಾದಿಯು ಹಾಜರುಪಡಿಸಿರುವಂತಹ ಮೌಖಿಕ ಸಾಕ್ಷವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ವಾದಿಯು ಪ್ರಸ್ತುತ ಈ ದಾವೆಯನ್ನು ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿದ್ದು, ಹಾಗಾಗಿ ಈ ಮೇಲ್ಕಂಡ 3 ಅಂಶಗಳನ್ನು ಸಾಬೀತುಪಡಿಸುವಂತಹ ಹೊಣೆಗಾರಿಕೆ ವಾದಿಯದ್ದೇ ಆಗಿರುತ್ತದೆ. ಈ ಕುರಿತು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ರಿಂದ 103 ರವರೆಗಿನ ಪರಿಕಲ್ಪನೆಗಳನ್ನು ಪರಿಶೀಲಿಸುವ ಅಗತ್ಯತೆ ಇರುತ್ತದೆ. ಸದರಿ ಕಾನೂನಿನ ಪರಿಕಲ್ಪನೆಗಳನ್ನು ಪರಿಶೀಲಿಸಿದಾಗ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ರಂತೆ ಯಾವುದೇ ಒಂದು ವಾಸ್ತವಾಂಶದ ಅಸ್ತಿತ್ವವನ್ನು ಸಾಬೀತುಪಡಿಸುವಂತಹ ಬಾಧ್ಯತೆಯನ್ನು ಯಾವ ವ್ಯಕ್ತಿಯು ಹೊಂದಿರುತ್ತಾನೋ ಅಂತಹ ವ್ಯಕ್ತಿಯೇ ಸದರಿ ವಾಸ್ತವಾಂಶವನ್ನು ಸಾಬೀತುಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾನೆಂದು ಸ್ಪಷ್ಟವಾಗಿ ಉಲ್ಲೇಖ ಇರುತ್ತದೆ. ಅಂತೆಯೇ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 102 ರಂತೆ ಯಾವುದೇ ಒಂದು ಪ್ರಕರಣದಲ್ಲಿ ಉಭಯಪಕ್ಷಗಾರರೂ ಕೂಡ ಸಾಕ್ಷ್ಯವನ್ನು ಒದಗಿಸದಂತಹ ಸಂದರ್ಭದಲ್ಲಿ ಸೋಲುವ ವ್ಯಕ್ತಿಯ ಮೇಲೆ ರುಜುವಾತಿನ ಭಾರ ಇರುತ್ತದೆ ಎಂದು ಸ್ಪಷ್ಟೀಕರಣಗೊಂಡಿರುತ್ತದೆ. ಅಂತೆಯೇ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 103 ರಂತೆ ಯಾವುದೇ ಒಂದು ವಾಸ್ತವಿಕತೆಯ ಕುರಿತು ಸಾಬೀತುಪಡಿಸುವಂತಹ ಹೊಣೆಗಾರಿಕೆಯು ಯಾವ ನಿರ್ದಿಷ್ಟ ವ್ಯಕ್ತಿಯ ಮೇಲೆ ಇರುತ್ತದೆಯೋ ಅಂತಹ ವ್ಯಕ್ತಿ ಸದರಿ ವಾಸ್ತವಿಕತೆಯನ್ನು ಸಾಬೀತುಪಡಿಸಬೇಕೆಂದು

ಇದ್ದು ಒಂದೊಮ್ಮೆ ಯಾವುದೇ ಒಂದು ಕಾನೂನಿನ ಮೂಲಕ ಅಂತಹ ವಾಸ್ತವಾಂಶವನ್ನು ಸಾಬೀತುಪಡಿಸುವ ಅಗತ್ಯತೆ ಇಲ್ಲ ಎಂದು ಹೇಳದ ಹೊರತು ನ್ಯಾಯಾಲಯವು ಅದರ ಅಸ್ತಿತ್ವವನ್ನು ನಂಬಬೇಕೆಂದು ಕೋರುವ ವ್ಯಕ್ತಿಯ ಮೇಲೆಯೇ ಸಾಬೀತುಪಡಿಸುವ ಹೊಣೆಗಾರಿಕೆ ಇರುತ್ತದೆ ಎಂದು ಉಲ್ಲೇಖಿಸಿರುತ್ತದೆ. ಈ ಮೇಲ್ಕಂಡ ಕಾನೂನಿನ ಪರಿಕಲ್ಪನೆಯಡಿಯಲ್ಲಿ ಪ್ರಸ್ತುತ ಪ್ರಕರಣದ ವಸ್ತುಸ್ಥಿತಿಯನ್ನು ಪರಿಶೀಲಿಸಿದಾಗ ವಾದಿಯು ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುವುದನ್ನು ಸಾಬೀತುಪಡಿಸಬೇಕಾಗುತ್ತದೆ.

12. ಈ ಮೇಲ್ಕಂಡ ಕಾನೂನಿನ ಅಂಶಗಳ ಹಿನ್ನಲೆಯಲ್ಲಿ ವಾದಿಯ ಹೇಳಿಕೆಗಳನ್ನು ಪರಿಶೀಲಿಸಲಾಗಿ, ವಾದಿಯು ಪ್ರಸ್ತುತ ಈ ದಾವೆಯನ್ನು ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದು, ಹಾಗಾಗಿ ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿರುತ್ತಾರೆ. ಈ ಕುರಿತು ವಾದಿಯು ಹಾಜರುಪಡಿಸಿರುವಂತಹ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಾದಿಯು ನಿಪಿ-1 ರಿಂದ 3 ರಂತೆ ವಾದಿಯ ತಂದೆಯು ದಾವಾ ಅನುಸೂಚಿತ ಸ್ವತ್ತನ್ನು ಖರೀದಿಸಿರುವ ಕುರಿತಾಗಿ ದಿನಾಂಕ 06.09.1944, 18.03.1958 ಹಾಗೂ 30.01.1986 ರ ನೋಂದಣಿ ಕ್ರಯ ಪತ್ರಗಳನ್ನು ಹಾಜರುಪಡಿಸಿರುತ್ತಾರೆ. ಹಾಗಾಗಿ ನಿಪಿ-1 ರಿಂದ 3 ನ್ನು ದಾಖಲಾತಿಗಳನ್ನು ಪರಿಶೀಲಿಸುವ ಅಗತ್ಯತೆ ಇರುತ್ತದೆ.

13. ಯಾವುದೇ ಒಂದು ನೊಂದಣಿ ದಾಖಲಾತಿಯನ್ನು ಹಾಜರುಪಡಿಸಿ ನಿಶಾನಿಸಿದ ಕಾಲಕ್ಕೆ ಸದರಿ ದಾಖಲಾತಿಯನ್ನು ಪರಿಗಣಿಸುವ ಕುರಿತು ನ್ಯಾಯಾಲಯವು ಈ ಕೆಳಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಉಲ್ಲೇಖಿಸುತ್ತದೆ:-

**Civil Appeal No.1782 and 1783/2009**

**Vishweshwaranatha Bapu Rao Sabale Vs Shalini Bai Nagappa Sabale and Others,**

The Hon'ble Supreme Court has held that "there is a presumption that a registered document is validly executed, a registered document therefore prima facie would be valid in law. The onus of proof thus would be on a person who leads evidence to rebut the presumption."

**AIR 2006 SC, page 3608,**

**Premchand and others V.s Birbak Singh and Others**

The Hon'ble Supreme Court has held that " There is a presumption that a registered document is validly executed. A registered document, therefore, prima facie would be valid in law. The onus of proof, thus, would be on a person who leads evidence to rebut the presumption."

14. ಈ ಮೇಲ್ಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಅನುಪಾತವನ್ನು ಪರಿಶೀಲಿಸಲಾಗಿ, ಯಾವುದೇ ಒಂದು ನೊಂದಣಿ ದಾಖಲಾತಿಯು ಕಾನೂನಿನ ಮಾನ್ಯತೆಯನ್ನು ಹೊಂದಿರುತ್ತದೆ ಎಂದು ಹಾಗೂ ಸದರಿ ದಾಖಲಾತಿಯು ಕಾನೂನಿನ ಅಡಿಯಲ್ಲಿ ಪರಿಗಣಿಸಬಹುದಾದ ದಾಖಲಾತಿ ಆಗಿರುತ್ತದೆ ಎಂದು ನಿರ್ಣಯಿಸಿರುತ್ತದೆ. ಅಂತೆಯೇ ನೊಂದಣಿ ದಾಖಲಾತಿಯನ್ನು ಯಾವ ಪಕ್ಷಗಾರನು ಅಲ್ಲಗಳೆದಿರುತ್ತಾನೆಯೋ ಅಂತಹ ಪಕ್ಷಗಾರನು ಸದರಿ ದಾಖಲಾತಿಯನ್ನು

ಅಲ್ಲಗಳೆಯಬಹುದಾದ ರೀತಿಯಲ್ಲಿ ಸಾಬೀತುಪಡಿಸದ ಹೊರತು, ಸದರಿ ದಾಖಲಾತಿಯ ಕುರಿತು ಕಾನೂನಿನ ಪ್ರಕ್ರಿಯೆಯ ಅಡಿಯಲ್ಲಿ ಪೂರ್ವಭಾವನೆಯನ್ನು ಮಾಡಬಹುದು ಎಂದು ನಿರ್ಣಯಿಸಿರುತ್ತದೆ. ಈ ಮೇಲ್ಕಂಡ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ಅನುಪಾತವನ್ನು ಪ್ರಸ್ತುತ ಪ್ರಕರಣದ ವಸ್ತುಸ್ಥಿತಿಗೆ ಅನ್ವಯಿಸಲಾಗಿ, ಪ್ರಸ್ತುತ ಈ ಪ್ರಕರಣದ ವಾದಿಯ ತಂದೆಯು ನಿಪಿ-3 ರ ನೋಂದಣಿ ಕ್ರಯ ಪತ್ರದಂತೆ ದಾವಾ ಅನುಸೂಚಿತ ಸ್ವತ್ತನ್ನು ಖರೀದಿಸಿದ್ದು, ನಿಪಿ-1 ಮತ್ತು 2 ರ ಕ್ರಯ ಪತ್ರಗಳು ನಿಪಿ-3 ರ ಕ್ರಯ ಪತ್ರದ ಕುರಿತಾದ ಮೂಲ ದಾಖಲಾತಿಗಳಾಗಿರುತ್ತದೆ. ಆದ್ದರಿಂದ ನಿಪಿ-1 ರಿಂದ 3 ರ ನೋಂದಣಿ ಕ್ರಯ ಪತ್ರಗಳ ಕುರಿತು ವಾದಿಯ ಪರವಾಗಿ ಪೂರ್ವ ಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

15. ಈ ಮೇಲ್ಕಂಡಂತೆ ನಿಪಿ-1 ರಿಂದ 3 ರಂತೆ ಹಾಜರುಪಡಿಸಿರುವ ದಿನಾಂಕ 06.09.1944, 18.03.1958 ಹಾಗೂ 30.01.1986 ರ ನೋಂದಣಿ ಕ್ರಯ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಕಾಲಕ್ಕೆ ಸದರಿ ದಾಖಲಾತಿಯು ಜಾರಿಯಾಗಿ 30 ವರ್ಷಗಳಷ್ಟು ಹೆಚ್ಚಿನ ಸಮಯ ಆಗಿರುವುದು ಕಂಡುಬರುತ್ತದೆ. ಈ ಕುರಿತಾಗಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 90 ನ್ನು ಪರಿಶೀಲಿಸುವುದು ಮುಖ್ಯವಾಗಿರುತ್ತದೆ.

ಮೂವತ್ತು ವರ್ಷಗಳ ಹಿಂದಿನ ದಸ್ತಾವೇಜುಗಳ ಬಗ್ಗೆ ಪೂರ್ವಭಾವನೆ:-

> ಮೂವತ್ತು ವರ್ಷಗಳ ಹಿಂದಿನದೆಂದು ತಾತ್ಪರ್ಯವಾಗುವ ಅಥವಾ ಸಾಬೀತಾಗಿರುವ ಯಾವುದೇ ದಸ್ತಾವೇಜನ್ನು ನ್ಯಾಯಾಲಯವು ಒಂದು ನಿರ್ದಿಷ್ಟವಾದ ಮೊಕದ್ದಮೆಯಲ್ಲಿ ಸೂಕ್ತವೆಂದು ಭಾವಿಸುವ ಯಾವುದೇ ಅಭಿರಕ್ಷೆಯಿಂದ ಹಾಜರುಪಡಿಸಿದಾಗ, ಅದು ಯಾವನೇ ಒಬ್ಬ ನಿರ್ದಿಷ್ಟ

ವ್ಯಕ್ತಿಯ ಕೈಬರಹದಲ್ಲಿದೆ ಎಂದು ತಾತ್ಪರ್ಯವಾಗುವ ಸಹಿ ಮತ್ತು ಅಂತಹ ದಸ್ತಾವೇಜಿನ ಇನ್ನಿತರ ಪ್ರತಿಯ ಭಾಗವು ಆ ವ್ಯಕ್ತಿಯ ಕೈಬರಹದಲ್ಲಿದೆ ಎಂದೂ ಮತ್ತು ಬರೆದುಕೊಟ್ಟ ಅಥವಾ ಅನುಪ್ರಮಾಣಿತ ದಸ್ತಾವೇಜಿನ ಸಂಧರ್ಭದಲ್ಲಿ ಅದು ಯಾರಿಂದ ಬರೆದುಕೊಟ್ಟಿದ್ದೆಂದು ಮತ್ತು ಅನುಪ್ರಮಾಣಿತವಾಗಿದ್ದೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಗಳಿಂದ ಉಚಿತ ರೀತಿಯಲ್ಲಿ ಬರೆದುಕೊಡಲಾಗಿದೆ ಎಂದು ಮತ್ತು ಅನುಪ್ರಮಾಣಿತವಾಗಿದೆ ಎಂದು ಪೂರ್ವಭಾವನೆ ಮಾಡಬಹುದು.

16. ಈ ಮೇಲ್ಕಂಡ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸಿದಾಗ ಯಾವುದೇ ಒಂದು ದಾಖಲಾತಿಯನ್ನು ಒಂದು ದಾವೆಯಲ್ಲಿ ಹಾಜರುಪಡಿಸಿದಾಗ ಸದರಿ ದಾಖಲಾತಿಯು ರಚನೆಯಾಗಿರುವ ಮತ್ತು ಸಹಿಗಳನ್ನು ಮಾಡಿರುವ ಕುರಿತಾಗಿ ಮತ್ತು ಸದರಿ ದಾಖಲಾತಿಯನ್ನು ಅನುಪ್ರಮಾಣಿತ ಮಾಡಿರುವ ಕುರಿತಾಗಿ ಸದರಿ ದಾಖಲಾತಿಯಲ್ಲಿ ನಮೂದಾಗಿರುವ ಅಂಶಗಳಂತೆ ದಾಖಲಾತಿಯನ್ನು ಹಾಜರುಪಡಿಸುವ ಪಕ್ಷಗಾರರ ಪರವಾಗಿ ಪೂರ್ವಭಾವನೆಯನ್ನು ಮಾಡಬಹುದು ಎಂದು ಉಲ್ಲೇಖಿಸಿರುತ್ತದೆ. ಈ ಮೇಲ್ಕಂಡ ಕಾನೂನಿನ ಪರಿಕಲ್ಪನೆಯನ್ನು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸಲಾಗಿ, ಪ್ರಸ್ತುತ ಈ ಪ್ರಕರಣದ ವಾದಿಯ ತಂದೆಯು ನಿಪಿ-3 ರ ನೋಂದಣಿ ಕ್ರಯ ಪತ್ರದಂತೆ ದಾವಾ ಅನುಸೂಚಿತ ಸ್ವತ್ತನ್ನು ಖರೀದಿಸಿದ್ದು, ನಿಪಿ-1 ಮತ್ತು 2 ರ ಕ್ರಯ ಪತ್ರಗಳು ನಿಪಿ-3 ರ ಕ್ರಯ ಪತ್ರದ ಕುರಿತಾದ ಮೂಲ ದಾಖಲಾತಿಗಳಾಗಿರುತ್ತದೆ. ಆದ್ದರಿಂದ ನಿಪಿ-1 ರಿಂದ 3 ರ ನೋಂದಣಿ ಕ್ರಯ ಪತ್ರಗಳ ಕುರಿತು ವಾದಿಯ ಪರವಾಗಿ ಪೂರ್ವ ಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.ಆದ್ದರಿಂದ ನಿಪಿ-1 ರಿಂದ 3 ರ ನೋಂದಣಿ ಕ್ರಯ

ಪತ್ರಗಳ ಕುರಿತು ವಾದಿಯ ಪರವಾಗಿ ಪೂರ್ವ ಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

17. ಈ ಮೇಲ್ಕಂಡ ದಾಖಲಾತಿಗಳನ್ನು ಮತ್ತು ವಾದಿಯರು ಹಾಜರುಪಡಿಸಿರುವ ಮೌಖಿಕ ಸಾಕ್ಷ್ಯವನ್ನು ಪರಿಶೀಲಿಸಿದಾಗ, ದಾವಾ ಅನುಸೂಚಿತ ಸ್ವತ್ತಿನ ಕುರಿತು ವಾದಿಯರ ಅಜ್ಜನಾದ ಹೆಚ್ ಸಿ ಶಿವಪ್ಪ ಬಿನ್ ಚನ್ನಮಲ್ಲಯ್ಯರವರ ಹೆಸರಿನಲ್ಲಿ ಖಾತೆ ಇರುವುದು ಮತ್ತು ಸ್ವಾಧೀನದಾರರು ಎಂಬಲ್ಲಿ ಹೆಚ್ ಸಿ ಶಿವಪ್ಪ ಬಿನ್ ಚನ್ನಮಲ್ಲಯ್ಯರವರ ಹೆಸರು ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಿದಾಗ, ವಾದಿಯರ ಕುಟುಂಬದವರು ದಾವಾ ಅನುಸೂಚಿತ ಸ್ವತ್ತಿನ ಕಾನೂನುಬದ್ದ ಮಾಲೀಕತ್ವವನ್ನು ಹೊಂದಿ ಸ್ವಾಧೀನತೆಯನ್ನು ಹೊಂದಿರುವುದು ಸ್ಪಷ್ಟೀಕರಣಗೊಳ್ಳುತ್ತದೆ. ಅಂತೆಯೇ ವಾದಿಯರು ಹಾಜರುಪಡಿಸಿರುವಂತಹ ನಿಪಿ-1 ರಿಂದ 4 ರ ಚೆಕ್ಕುಬಂದಿ ಹಾಗೂ ವಾದಪತ್ರದಲ್ಲಿನ ಚೆಕ್ಕುಬಂದಿ ಮತ್ತು ವಿಸ್ತೀರ್ಣ ಒಂದಕ್ಕೊಂದು ಪೂರಕವಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ವಾದಿಯರು ಹಾಜರುಪಡಿಸಿರುವಂತಹ ನಿಪಿ-1 ರಿಂದ ನಿಪಿ-4 ರವರೆಗಿನ ದಾಖಲಾತಿಗಳನ್ನು ಪರಿಶೀಲಿಸಿದಾಗ, ಸದರಿ ದಾಖಲಾತಿಗಳಂತೆ ವಾದಪತ್ರದಲ್ಲಿ ನಮೂದಿಸಿರುವಂತೆ ಸ್ವತ್ತಿನ ಅಸ್ತಿತ್ವ ಇರುವುದು ಕಂಡುಬರುತ್ತದೆ. ವಾದಿಯರ ಈ ಮೇಲ್ಕಂಡ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಪ್ರಶ್ನಿಸುವಂತಹ ಯಾವುದೇ ಪ್ರಯತ್ನವನ್ನು ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗುವುದರ ಮೂಲಕ ಪ್ರಯತ್ನಿಸಿರುವುದಿಲ್ಲ. ಅಂತೆಯೇ ವಾದಿಯರ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ನಿರಾಕರಣೆ ಮಾಡುವಂತಹ ಯಾವುದೇ ಸಾಕ್ಷ್ಯವನ್ನೂ ಕೂಡ ಹಾಜರುಪಡಿಸಿರುವುದಿಲ್ಲ.

18. ವಾದಿಯರು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ತಮ್ಮ ಶಾಂತಿಯುತ ಸ್ವಾಧೀನತೆಗೆ ಪ್ರತಿವಾದಿಯರು ತೊಂದರೆ ನೀಡಿರುತ್ತಾರೆಂದು ಆ

ಕಾರಣದಿಂದಾಗಿ ವಾದಿಯರ ದಾವಾ ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾಧೀನತೆಗೆ ಪ್ರತಿವಾದಿಯರು ತಕರಾರು ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ನೀಡಬೇಕೆಂದು ಕೋರಿ ಪ್ರಾರ್ಥಿಸಿಕೊಂಡಿರುತ್ತಾರೆ. ವಾದಿಯರು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ದಾವಾ ಅನುಸೂಚಿತ ಸ್ವತ್ತನ್ನು ವಾದಿಯರು ಹೊಂದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗಾಗಿ ಪ್ರತಿವಾದಿಯರಿಂದ ವಾದಿಯರ ಸ್ವತ್ತಿನ ಸ್ವಾಧೀನತೆಗೆ ಯಾವುದೇ ತಕರಾರು ಮಾಡದಂತೆ ವಾದಿಯರಿಗೆ ಪರಿಹಾರ ನೀಡುವುದು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ತುಂಬಾ ಅವಶ್ಯಕತೆ ಇರುತ್ತದೆ. ಹಾಗಾಗಿ ವಾದಿಯರು ದಾವೆಯಲ್ಲಿ ಕೋರಿರುವಂತೆ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಅಂಶ 1 ರಿಂದ ಅಂಶ 3 ನ್ನು ಸಕಾರಾತ್ಮಕವೆಂದು ನಿರ್ಣಯಿಸಲಾಗಿರುತ್ತದೆ.

19. **<u>ಅಂಶ :</u>-** ಈ ಮೇಲ್ಕಂಡ ಎಲ್ಲಾ ವಿವಾದಾಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**<u>ಆದೇಶ</u>**

ವಾದಿಯು ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿರುತ್ತದೆ.

ಪ್ರತಿವಾದಿಯಾಗಲಿ, ಅವರ ಕುಟುಂಬದ ಸದಸ್ಯರಾಗಲಿ ಅಥವಾ ಅವರಿಂದ ನೇಮಕಗೊಂಡ ಯಾವುದೇ ಕೆಲಸಗಾರರಾಗಲೀ, ಪ್ರತಿವಾದಿಯ ಬೆಂಬಲಿಗರಾಗಲೀ ಅಥವಾ ಯಾವುದೇ ವ್ಯಕ್ತಿಗಳಾಗಲೀ ಅತಿಕ್ರಮ ಪ್ರವೇಶ ಉಂಟು ಮಾಡಿ ದಾವಾ ಅನುಸೂಚಿತ ಸ್ವತ್ತಿಗೆ ಅಡ್ಡಿ, ಆತಂಕ, ಕಿರುಕುಳ

ನೀಡದಂತೆ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಲಾಗಿರುತ್ತದೆ.

ಈ ಪ್ರಕಾರ ಡಿಕ್ರಿ ಬರೆಯುವಂತೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 16 ನೇ ನವೆಂಬರ್, 2022 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ, ನಂಜನಗೂಡು.

**ಅನುಬಂಧ**

**ವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-**

ಪಿ.ಡಬ್ಲೂ.1 : ಹೆಚ್.ಎಸ್. ಸುಗುಣ

**ವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-**

ನಿ.ಪಿ.1 ರಿಂದ 3: ನೋಂದಣಿ ಕ್ರಯಪತ್ರ
ನಿ.ಪಿ.4 : ಅಸೆಸ್ ಮೆಂಟ್ ದೃಡೀಕೃತ ನಕಲು
ನಿ.ಪಿ.45 : ಮರಣ ಪ್ರಮಾಣ ಪತ್ರ

**ಪ್ರತಿವಾದಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-**

- ಇಲ್ಲ -

**ಪ್ರತಿವಾದಿ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-**

- ಇಲ್ಲ -

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ, ನಂಜನಗೂಡು.